ಆ) ಗ್ರಾಮಗಳ ಆಯ್ಕೆ ಜವಾಬ್ದಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ವಹಿಸಲಾಗಿದ್ದು, ಸದರಿ ಆಯ್ಕೆಯನ್ನು ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಿ, ಆಯ್ಕೆಗಾಗಿ ಉಸ್ತುವಾರಿ ಸಚಿವರು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾರೆ. ಆದ್ದರಿಂದ ಆಗಿನ ಶಾಸಕರ ಪತ್ರ ದಿ: 20-01-2007 ಮತ್ತು ಉಸ್ತುವಾರಿ ಸಚಿವರ ಟಿಪ್ಪಣಿ ದಿ: 24-01-2007ರ ಶಿಫಾರಸ್ಸಿನನ್ವಯ ಸದರಿ ಗ್ರಾಮಗಳನ್ನು ಪರಿಗಣಿಸಿರುವುದಿಲ್ಲ.

ಇ) ಮಾಳಾ ಗ್ರಾಮವನ್ನು ಅಧಿಕೃತವಾಗಿ ಸರ್ಕಾರಿ ಆದೇಶದ ಮುಖಾಂತರ ಆಯ್ಕೆ ಮಾಡಲಾಗಿದ್ದಿಲ್ಲ. ಆದರೆ ಸಂಭವನೀಯ ಆಯ್ಕೆ ಪಟ್ಟಿಯಲ್ಲಿ ಮಾಳಾ ಗ್ರಾಮವಿದ್ದು, ಮಾನ್ಯ ಉಸ್ತುವಾರಿ ಸಚಿವರ ಟಿಪ್ಪಣಿ ದಿ: 12-03-2009ರಲ್ಲಿ ಆಯ್ಕೆಗೆ ಶಿಫಾರಸ್ಸು ಇರುವುದಿಲ್ಲವಾದ್ದರಿಂದ ಆಯ್ಕೆಯಾಗಿರುವುದಿಲ್ಲ.

462 ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ನಂಜುಂಡಪ್ಪ ವರದಿ ಪ್ರಕಾರವಾಗಿ ಬಾಗೇಪಲ್ಲಿ-ಗುಡಿಬಂಡೆಯು ಅತಿ ಹಿಂದುಳಿದ ಮತ್ತು ಹಿಂದುಳಿದ ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಬಡ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಡಿ.ಎಡ್.ಕಾಲೇಜು ಪ್ರಾರಂಭ ಮಾಡುವ ಉದ್ದೇಶವಿದೆಯೇ;

ಈ) ಉದ್ದೇಶವಿದ್ದಲ್ಲಿ, ಈ ಕಾಲೇಜನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಗುಡಿಬಂಡೆ ತಾಲ್ಲೂಕು ಮಾತ್ರ ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ತಾಲ್ಲೂಕು ಪಟ್ಟಿಯಲ್ಲಿ ಇದೆ.

ಆ) ಇಲ್ಲ.

ಇ) ಮತ್ತು ಈ) ಉದ್ಭವಿಸುವುದಿಲ್ಲ.